ಬೆಳೆದಿರುತ್ತಾರೆ. ಈ ವರ್ಷ ರೇಣುಕಾ ಶುಗರ್ಸ್ ರವರು ಪ್ರಾಯೋಗಿಕವಾಗಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದರಿಂದ ಅವರ ಸಾಮರ್ಥ್ಯಕ್ಕೆ ತಕ್ಕಂತೆ, ಕಬ್ಬು ನುರಿಸಲು ಆಗಿರುವುದಿಲ್ಲ. ಅದೇ ರೀತಿ ಆಳಂದ ಸಹಕಾರ ಸಕ್ಕರೆ ಕಾರ್ಖಾನೆಯು ಕೂಡಾ ಕಡಿಮೆ ಸಾಮರ್ಥ್ಯದ ಕಾರ್ಖಾನೆಯಾಗಿದ್ದು, ಕಳೆದ ಸಾಲಿನಲ್ಲಿ ಸ್ಥಗಿತಗೊಂಡು ಈ ವರ್ಷದಿಂದ ಪುನಃ ಪ್ರಾರಂಭವಾಗಿದೆ. ಹೆಚ್ಚುವರಿ ಬೆಳೆದ ಕಬ್ಬನ್ನು ನುರಿಸಲು ಶಕ್ತಿ ಮೀರಿ ಪ್ರಯತ್ನ ಪಟ್ಟರೂ ಹೆಚ್ಚುವರಿ ಕಬ್ಬನ್ನು ನುರಿಸಲಾಗಿಲ್ಲ. ಈ ವಿಷಯ ಸರ್ಕಾರದ ಗಮನಕ್ಕೆ ಬಂದ ನಂತರ ಹೆಚ್ಚುವರಿಯಾಗಿ ಉಳಿದ ಕಬ್ಬನ್ನು ನೆರೆಯ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಲ್ಲಿ ನುರಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಹಾಗೂ ರೈತರಿಗೆ ಮತ್ತು ಕಾರ್ಖಾನೆಗಳಿಗೆ ರಿಯಾಯಿತಿಗಳನ್ನು ಸಹ ಒದಗಿಸಲಾಗಿದೆ.

ಆ) ಹೆಚ್ಚುವರಿ ಬೆಳೆದ `ಕಬ್ಬನ್ನು ನುರಿಸಲು ಶಕ್ತಿ ಮೀರಿ ಪ್ರಯತ್ನ ಪಡಲಾಗಿದೆ. 2007–08ನೇ ಸಾಲಿನಿಂದ ಕಾರ್ಖಾನೆಗಳೂ ತಮ್ಮ ಪೂರ್ಣ ಪ್ರಮಾಣದ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಕಬ್ಬನ್ನು ನುರಿಸುವ ಸಾಧ್ಯತೆ ಇದೆ. ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ರವರು ಕಾರ್ಖಾನೆಯ ಆಡಳಿತಾಧಿಕಾರಿಗಳೊಂದಿಗೆ ಮತ್ತು ರೈತರೊಂದಿಗೆ ಸಭೆ ನಡೆಸಿ, ಪರಿಸ್ಥಿತಿ ಪರಿಶೀಲನೆ ಮಾಡಿರುತ್ತಾರೆ. ಕಾರ್ಖಾನೆಯ ಆಡಳಿತ ಮಂಡಳಿ ಮತ್ತು ರೈತ ಮುಖಂಡರ ಸಮನ್ವಯ ಸಮಿತಿ ರಚಿಸುವ ವಿಷಯ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಇಲ್ಲ.

568 (692) ಶ್ರೀ ಎಂ.ವೈ. ಪಾಟೀಲ್ (ಅಫ್ಜಲ್‌ಪುರ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಕಣಿವೆಯ ಮೇಲೆ ಅಫಜಲಪುರ ತಾಲ್ಲೂಕಿನ ಭೀಮಾ ನದಿಯ ಬಂದರವಾಡ ಮತ್ತು ಮೈನಾಳ ಏತ ನೀರಾವರಿ ಯೋಜನೆಗಳು "ಬಿ" ಸ್ಕೀಂನಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ವೆಚ್ಚ ಎಷ್ಟು;

ಇ) ಎಷ್ಟು ಎಕರೆಗಳಿಗೆ ನೀರು ಸಿಗಬಹುದು ಎಂಬ ಅಂದಾಜನ್ನು ಸರ್ಕಾರ ಸಿದ್ಧಪಡಿಸಿದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) "ಬಿ" ಸ್ಕೀಂನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿ ಗುರುತಿಸಿಕೊಂಡಿರುವ ಯೋಜನೆಗಳಲ್ಲಿ ಬಂದರವಾಡ ಏತ ನೀರಾವರಿ ಯೋಜನೆ ಸೇರಿರುತ್ತದೆ. ಮೈನಾಳ ಏತ ನೀರಾವರಿ ಯೋಜನೆ ಸೇರಿರುವುದಿಲ್ಲ.

ಆ) ಕೃಷ್ಣಾ ನ್ಯಾಯಾಧೀಕರಣದ ಮುಂದೆ ದಾಖಲಿಸಿರುವ ಯೋಜನಾ ವರದಿಯಂತೆ ಬಂದರವಾಡ ಯೋಜನೆಯ ಅಂದಾಜು ಮೊತ್ತ ರೂ.132.25 ಕೋಟಿಗಳಾಗಿರುತ್ತದೆ.

ಇ) ಯೋಜನಾ ವರದಿಯಂತೆ ಸುಮಾರು 25,000 ಎಕರೆಗಳು ನೀರಾವರಿ ಆಗಬಹುದೆಂದು ಅಂದಾಜಿಸಲಾಗಿದೆ.

569 (693) ಶ್ರೀ ಪಾಟೀಲ್.ಎಂ.ವೈ. (ಅಫ್ಜಲ್‌ಪುರ್) :– ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಫಜಲಪುರ ತಾಲ್ಲೂಕಿನಲ್ಲಿ ರೇಣುಕಾ ಶುಗರ್ ಆಳಂದ ಸಕ್ಕರೆ ಕಾರ್ಖಾನೆ ಬರುತ್ತಿರುವುದು ನಿಜವೇ;

ಆ) ಈ ಸಕ್ಕರೆ ಕಾರ್ಖಾನೆಗಳಿಂದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಈ ಕಾರ್ಖಾನೆಯಲ್ಲಿ ರಸ್ತೆ ಅಭಿವೃದ್ಧಿಗಾಗಿ ಸೆಸ್ ರೂಪದಲ್ಲಿ ಸಂಗ್ರಹವಾದ ಹಣವೆಷ್ಟು;

ಈ) ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಿ, ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಸರ್ಕಾರದ ಗಮನದಲ್ಲಿದೆಯೇ;

ಉ) ಹಾಗಿದ್ದಲ್ಲಿ, ಯಾವಾಗ ಈ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ, ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನಲ್ಲಿ ರೇಣುಕಾ ಸಕ್ಕರೆ ಕಾರ್ಖಾನೆಯು 2006–07ನೇ ಸಾಲಿನಲ್ಲಿ ಕಾರ್ಯಾರಂಭ ಮಾಡಿರುತ್ತದೆ.